# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2006-07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ 45 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ-ಆದೇಶ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 38 ಮೊದೇಶಾ 2005, ದಿನಾಂಕ:21.10.2005.

2) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ :ಕವಶಿಸಸ/ಸಿಆರ್(ಶಿಕ್ಷಣ)-1-2006-07, ದಿನಾಂಕ:04.04.2006.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದಲ್ಲಿ 2005-06ನೇ ಸಾಲಿಗೆ ಪರಿಶಿಷ್ಟ ಜಾತಿಯವರಿಗೆ-10, ಹಿಂದುಳಿದ ವರ್ಗದವರಿಗೆ-11 ಮತ್ತು ಪರಿಶಿಷ್ಟ ವರ್ಗವರಿಗೆ-9 ರಂತೆ ಒಟ್ಟು-30 ವಸತಿ ಶಾಲೆಗಳನ್ನು ಪ್ರಾರಂಭ ಮಾಡಲು ಮಂಜೂರಾತಿ ನೀಡಲಾಗಿತ್ತು.

ಮೇಲೆ ಓದ್ದಲಾಧ ಕ್ರಮಸಂಖ್ಯೆ(2)ರ ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರ ಪತ್ರದಲ್ಲಿ ಗ್ರಾಮಾಂತರ ಭಾಗದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಹೆಚ್ಚಿನ ಶಿಕ್ಷಣಾವಕಾಶವನ್ನು ಕಲ್ಪಿಸಿ ಉತ್ತಮ ಶಿಕ್ಷಣ ನೀಡುವ ಸಲುವಾಗಿ ಒಟ್ಟು 45 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದಾಗಿ 2006-07ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಸಿಸಲಾಗಿದ್ದು, ಅದರಂತೆ ಪರಿಶಿಷ್ಟ ಜಾತಿಯವರಿಗೆ -20, ಪರಿಶಿಷ್ಟ ವರ್ಗದವರಿಗೆ-5 ಮತ್ತು ಹಿಂದುಳಿದ ವರ್ಗದವರಿಗೆ-20 ವಸತಿ ಶಾಲೆಗಳನ್ನು ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಬೇಕಾಗಿದೆ.

ಡಾ: ಡಿ.ಎಂ.ನಂಜುಂಡಪ್ಪ, ರವರ ವರದಿ ಆಧಾರದ ಮೇಲೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದಾಗಿ ತೀರ್ಮಾನಿಸಿರುವುದರಿಂದ ಈ 45 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಬಿಸಬೇಕೆನ್ನುವ ಬಗ್ಗೆ ಹಾಗೂ ಈ ವಸತಿ ಶಾಲೆಗಳನ್ನು 2006-07ನೇ ಸಾಲಿನಲ್ಲಿ ಪ್ರಾರಂಭಿಸಿದಲ್ಲಿ ಮುಂದಿನ 5 ವರ್ಷಗಳಲ್ಲಿ ಮಂಜೂರು ಮಾಡಬೇಕಾದ ಹುದ್ದೆಗಳು 2006-07ನೇ ಸಾಲಿನಿಂದ 2010-11ನೇ ಸಾಲಿನವರಗೆ ವೇತನಾಂಶ, ಆವರ್ತಕ ವೆಚ್ಚ ಮತ್ತು ಅನಾವರ್ತಕ ವೆಚ್ಚಗಳಿಗಾಗಿ ಬೇಕಾಗುವ ಅನುದಾನ ಮಂಜೂರು ಮಾಡಬೇಕಾಗುತ್ತದೆಂದು ತಿಳಿಸಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಮಂಜೂರಾದ 76 ವಸತಿ ಶಾಲೆಗಳನ್ನು ಕನ್ನಡ ಮಾಧ್ಯಮದಲ್ಲಿ ಪ್ರಾರಂಭಿಸಿರುವುದರಿಂದ ಈ ಸಾಲಿನಲ್ಲಿ ಮಂಜೂರಾತಿ ನೀಡುವ 45 ವಸತಿ ಶಾಲೆಗಳನ್ನು ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಿದಲ್ಲಿ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಭವಿಷ್ಯ ಉಜ್ವಲವಾಗುವುದೆಂದು ತಿಳಿಸಿದ್ದಾರೆ.ಈ ವಸತಿ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಬೇಕೆಂಬ ಬಗ್ಗೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ:ಸಕಇ 34 ಮೊದೇಶಾ 2006, ಬೆಂಗಳೂರು,ದಿನಾಂಕ:17.06.2006.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2006-07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗೆ-20, ಹಿಂದುಳಿದ ವರ್ಗದವರಿಗೆ-20, ಹಾಗೂ ಪರಿಶಿಷ್ಟ ವರ್ಗದವರಿಗೆ-5 ರಂತೆ ಒಟ್ಟು 45 ಮೊರಾರ್ಜಿ

[illegible] ವಸತಿ ಶಾಲೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ.

**1. ಪರಿಶಿಷ್ಟ ಜಾತಿ ವಸತಿ ಶಾಲೆಗಳು -20**

| ಕ್ರಮ ಸಂಖ್ಯೆ | ಜಿಲ್ಲೆಗಳು | ಕ್ರಮ ಸಂಖ್ಯೆ | ವಿಧಾನಸಭಾ ಕ್ಷೇತ್ರಗಳು |
|---|---|---|---|
| 1 | ಚಿತ್ರದುರ್ಗ | 1 | ಭರಮಸಾಗರ |
| 2. | ಕೋಲಾರ | 2 | ಬೇತಮಂಗಲ |
| | | 3. | ಬಾಗೇಪಲ್ಲಿ |
| 3. | ಶಿವಮೊಗ್ಗ | 4 | ಹೊಳೆಹೊನ್ನೂರು |
| 4. | ಮೈಸೂರು | 5 | ಹೆಚ್.ಡಿ.ಕೋಟೆ |
| | | 6 | ನಂಜನಗೂಡು |
| 5 | ಚಿಕ್ಕಮಗಳೂರು | 7 | ಬೀರೂರು |
| | | 8 | ಮೂಡಿಗೆರೆ |
| 6. | ಹಾಸನ | 9 | ಬೇಲೂರು |
| 7. | ಬಾಗಲಕೋಟೆ | 10 | ಬೀಳಗಿ |
| 8. | ಬೆಳಗಾಂ | 11 | ಅರಬಾವಿ |
| | | 12 | ಚಿಕ್ಕೋಡಿ |
| 9. | ಬಿಜಾಪುರ | 13 | ಬಸವನಬಾಗೇವಾಡಿ |
| 10. | ಹಾವೇರಿ | 14. | ಬ್ಯಾಡಗಿ |
| 11 | ಗುಲ್ಬರ್ಗ | 15. | ಸುರಪುರ |
| | | 16. | ಕಮಲಾಪುರ |
| | | 17 | ಗುರುಮಿಟಕಲ್ |
| 12. | ಬೀದರ್ | 18. | ಹುಲಸೂರು |
| 13 | ರಾಯಚೂರು | 19 | ದೇವದುರ್ಗ |
| | | 20 | ರಾಯಚೂರು |

**2. ಹಿಂದುಳಿದ ವರ್ಗದ ವಸತಿ ಶಾಲೆಗಳು-20**

| | | | |
|---|---|---|---|
| 1 | ಬೆಂಗಳೂರು(ಗ್ರಾ) | 1 | ರಾಮನಗರ |
| | | 2 | ಮಾಗಡಿ |
| 2 | ಶಿವಮೊಗ್ಗ | 3 | ಶಿಕಾರಿಪುರ |
| | | 4 | ತೀರ್ಥಹಳ್ಳಿ |
| 3 | ತುಮಕೂರು | 5 | ಹುಲಿಯೂರು ದುರ್ಗ |
| | | 6 | ಚಿಕ್ಕನಾಯಕನಹಳ್ಳಿ |
| | | 7 | ತುರುವೇಕೆರೆ |
| | | 8 | ಬೆಳ್ಳಾವಿ |
| 4 | ಚಿಕ್ಕಮಗಳೂರು | 9 | ಬೀರೂರು |
| 5 | ದಕ್ಷಿಣಕನ್ನಡ | 10 | ಬಂಟ್ವಾಳ |

| | | | |
|---|---|---|---|
| 6. | ಉಡುಪಿ | 11 | ಕಾರ್ಕಳ |
| 7. | ಹಾಸನ | 12 | ಅರಕಲಗೂಡು |
| | | 13. | ಹೊಳೇನರಸೀಪುರ |
| 8. | ಕೊಡಗು | 14 | ಸೋಮವಾರಪೇಟೆ |
| 9. | ಮಂಡ್ಯ | 15 | ನಾಗಮಂಗಲ |
| 10. | ಚಾಮರಾಜನಗರ | 16 | ಗುಂಡ್ಲುಪೇಟೆ |
| 11 | ಬೆಳಗಾಂ | 17 | ಅರಬಾವಿ |
| 12 | ಗದಗ | 18 | ನರಗುಂದ |
| 13 | ಹಾವೇರಿ | 19 | ಹಿರೇಕೆರೂರು |
| 14. | ಗುಲ್ಬರ್ಗ | 20 | ಚಿತಾಪುರ |
| 3.ಪರಿಶಿಷ್ಟ ವರ್ಗದ ವಸತಿ ಶಾಲೆಗಳು-5 | | | |
| 1 | ಬೆಂಗಳೂರು (ಗ್ರಾ) | 1 | ರಾಮನಗರ |
| 2. | ಬಳ್ಳಾರಿ | 2 | ಸಂಡೂರು |
| | | 3 | ಕುರುಗೋಡು |
| | | 4. | ಶಿರಗುಪ್ಪ |
| 3. | ಬೆಳಗಾಂ | 5. | ಗೋಕಾಕ್ |

ಮೇಲೆ ಸೂಚಿಸಲಾಗಿರುವ ಸ್ಥಳಗಳಲ್ಲಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ
ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ಶೇಖರಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು,
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3) ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು
4) ಮುಖ್ಯ ಕಾರ್ಯನಿರ್ವಹಣಾಧಿಕಾರಿ,ಜಿಲ್ಲಾ ಪಂಚಾಯತ್,ಬೆಂಗಳೂರು ನಗರ ಜಿಲ್ಲೆ
5) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು,
6) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,ಬೆಂಗಳೂರು
7) ಖಜಾನಾಧಿಕಾರಿಗಳು,ರಾಜ್ಯ ಹುಜೂರು ಖಜಾನೆ,ಬೆಂಗಳೂರು./ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳವರಿಗೆ
8) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
9) ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
10) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ,ಬೆಂಗಳೂರು
11) ಸರ್ಕಾರದ ಉಪ ಕಾರ್ಯದರ್ಶಿ,-3, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
12) ಸರ್ಕಾರದ ಅಧೀನ ಕಾರ್ಯದರ್ಶಿ-2 ಮತ್ತು 3, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಕಡತಗಳು